ಗಮನ ಸೆಳೆಯುವ ಸೂಚನೆ

ಕರ್ನಾಟಕ ಸೋಪು ಮತ್ತು ಮಾರ್ಜಕ ಘಟಕದವರು ತಯಾರಿಸಿದ ಭಾರಿ ಪ್ರಮಾಣದ ಸೋಪು ಮಾರಾಟವಾಗದೇ ಇರುವುದು

ಶ್ರೀ ಗೋಪಾಲಮುಂಕಂದ ಕಾನಡೆ— ಅಧ್ಯಕ್ಷರೆ, ಕರ್ನಾಟಕ ಸೋಪು ಮತ್ತು ಮಾರ್ಜಕ ಘಟಕದವರಿಂದ ಉತ್ಪಾದಿಸಲಾಗಿರುವ ಭಾರಿ ಪ್ರಮಾಣದ ಸೋಪು ಮಾರಾಟವಾಗದೆ ಇರುವ ವಿಚಾರದ ಬಗ್ಗೆ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್— (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು) ಅಧ್ಯಕ್ಷರೆ, ೩೧-೧೨-೮೫ರಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಮತ್ತು ಎಂ. ಎಸ್. ಐ. ಎಲ್ ನಲ್ಲಿ ಮಾರಾಟವಾಗದೇ ಉಳಿದಿರುವ ದಾಸ್ತಾನಿನ ವಿವರಗಳು ಈ ಕೆಳಗಿನಂತಿವೆ.

	ಸಾಬೂನು (ಮೆಟ್ರಿಕ್ ಟನ್‌ಗಳಲ್ಲಿ)	ಮಾರ್ಜಕಗಳು (ಮೆಟ್ರಿಕ್ ಟನ್‌ಗಳಲ್ಲಿ)	ಬೆಲೆ (ಲಕ್ಷ ರೂ.ಗಳಲ್ಲಿ)
ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	೧,೮೨೬	೩೩೬	೪೪೯.೦೦
ಎಂ. ಎಸ್. ಐ. ಎಲ್.	೫೯೯	೧೬೧	೧೫೫.೦೦

ಮೇಲಿನ ಸೂಚಿಕೆಯನ್ನು ನೋಡಿದಾಗ ಎರಡು ಕಂಪನಿಗಳಲ್ಲಿ ಮಾರಾಟವಾಗದೇ ಉಳಿದಿರುವ ದಾಸ್ತಾನಿನ ಒಟ್ಟು ಬೆಲೆಯು ೬೦೪.೦೦ ಲಕ್ಷ ರೂ.ಗಳಾಗಿರುತ್ತದೆ ಹಾಗೂ ಇದು ಎರಡೂವರೆ ತಿಂಗಳಿನ ಮಾರಾಟದ ಪೊತ್ತಕ್ಕೆ ಸಮನಾಗಿದೆ ಎಂ. ಎಸ್. ಐ. ಎಲ್ ಕಂಪನಿಯು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಉತ್ಪನ್ನಗಳ ಏಕೈಕ ಮಾರಾಟ ಪ್ರತಿನಿಧಿಯಾಗಿರುವ ಕಾರಣ ಈ ಕಂಪನಿಯ ಉತ್ಪನ್ನಗಳನ್ನು ಎಂ. ಎಸ್. ಐ. ಎಲ್. ಮೂಲಕವೇ ಮಾರಾಟ ಮಾಡಬೇಕಾಗಿದೆ. ಹೆಚ್ಚಿನ ಮಾರಾಟದಿಂದ ಹಾಗೂ ಸದ್ಯದ ಮಾರಾಟದ ಒತ್ತಡವನ್ನು ಹೆಚ್ಚಿಸುವ ಮೂಲಕ ಈ ದಾಸ್ತಾನುಗಳನ್ನು ತೆಗೆದುಕೊಂಡು ಮಾರಾಟ ಮಾಡಲು ಎಂ. ಎಸ್. ಐ. ಎಲ್. ಈಗಾಗಲೇ ಕ್ರಮ ತೆಗೆದುಕೊಂಡಿದೆ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಕಾರ್ಯಾಚರಣೆಯು ಇತ್ತೀಚೆಗಿನ ಪುನರ್ನಿರ್ವೀಕ್ಷಣೆಯಿಂದಾಗಿ ಕಂಪನಿಯ ಉತ್ಪಾದನೆಯು ಹೆಚ್ಚಾಗಿದೆ. ಸ್ವಲ್ಪ ಕಾಲದಲ್ಲಿ ಎಂ. ಎಸ್. ಐ. ಎಲ್. ನವರು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಎಲ್ಲಾ ದಾಸ್ತಾನುಗಳನ್ನು ತೆಗೆದುಕೊಳ್ಳಲು ಶಕ್ತರಾಗುತ್ತಾರೆ ಆದುದರಿಂದ ಸ್ವಲ್ಪ ಸಮಯದಲ್ಲೇ ಎಲ್ಲಾ ದಾಸ್ತಾನುಗಳನ್ನು ಮಾರಾಟ ಮಾಡಲು ಯಾವ ತೊಂದರೆಯು ಇರಲಾರದು.

ಶ್ರೀ ಗೋಪಾಲ ಮುಕುಂದ್ ಕಾನಡೆ.—ಅಧ್ಯಕ್ಷರೆ, ಇವರು ಎಂ. ಎಸ್. ಐ. ಎಲ್. ನ ಪರಿಗೆ ಮಾರಾಟಕ್ಕೆ ಈ ಸೋಪನ್ನು ಕೊಡಬೇಕಾಗಿದೆ. ಅದೇ ಸಾಬೂನು ಕಾರ್ಖಾನೆಯಲ್ಲಿಯೇ ಮಾರಾಟ ಮಾಡಿದರೆ ೧೧ ಪರ್‌ಸೆಂಟ್ ಇವರಿಗೆ ಉಳಿಯುತ್ತದೆ. ಅಲ್ಲಿಂದ ಅವರು ಬೇರೆ ಕಡೆ ಕಳುಹಿಸುತ್ತಾರೆ. ಆದ್ದರಿಂದ, ಅವರ ಪಬ್ಲಿಸಿಟಿ ಇಲ್ಲ. ಅದೇ ಈ ಸೋಪು ಕಾರ್ಖಾನೆಯಲ್ಲಿ ಸ್ಟಾಕ್ ಇದೆ. ಈ ಫ್ಯಾಕ್ಟರಿ ವಿಚಾರ ಏನಾಗಿದೆ, ೧೯೮೧ ರಿಂದ ೧೯೮೫ರ ವರೆಗೆ ೧೧ ಕೋಟಿ ರೂಪಾಯಿಗಳ ಲಾಸ್‌ನಲ್ಲಿದೆ. ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ೧೫ ಸಾವಿರ ಟನ್ ಉತ್ಪತ್ತಿಯನ್ನು ಮಾಡತಕ್ಕ ಸಂದರ್ಭದಲ್ಲಿ ೭,೨೮೦ ಟನ್ ಮಾತ್ರ ಉತ್ಪತ್ತಿ ಮಾಡುತ್ತಿದ್ದಾರೆ. ಇದು ಅಲ್ಲದೆ, ಈಗ ೧೦ ಕೋಟಿ ರೂಪಾಯಿಗಳ ಖರ್ಚು ಮಾಡಿ ಮತ್ತೊಂದು ಮೆಷಿನರಿ ಖರೀದಿ ಮಾಡಲಿಕ್ಕೆ ಹೊರಟಿದ್ದಾರೆ. ೧೫ ಸಾವಿರ ಟನ್ ಉತ್ಪತ್ತಿ ಮಾಡತಕ್ಕ ಮೆಷಿನರಿಯಲ್ಲಿ ೭,೨೦೦ ಟನ್ ಉತ್ಪತ್ತಿ ಮಾಡುತ್ತಿದ್ದು ಅದೂ ಮಾರಾಟವಾಗುತ್ತಿಲ್ಲ. ಅಲ್ಲಿದ್ದ ಹಂಗಾಮಿ ಕೆಲಸಗಾರರನ್ನು ಈಗ ತೆಗೆದಿದ್ದಾರೆ. ಇವರು ಮಾರಾಟ ಮಾಡಲಿಕ್ಕೆ ಎಂ. ಎಸ್ ಐ. ಎಲ್. ಅವರಿಗೆ ಕೊಡದೇ ಮತ್ತೆ ಕೆಲಸಗಾರರನ್ನು ತೆಗೆದುಕೊಂಡು ಇವರೇ ಡೈರೆಕ್ಟ್ ಆಗಿ ಸೇಲ್ ಮಾಡಲಿಕ್ಕೆ ತಾಪತ್ರಯ ಏನು ?

೧-೦೦ ಪಿ. ಎಂ.

ಶ್ರೀ ಜೆ. ಹೆಚ್. ಪಟೇಲ್.—ತಾಪತ್ರಯಂ ಏನೂ ಇಲ್ಲ. ಸೋಪು ಕಾರ್ಖಾನೆ ಮತ್ತು ಅದರ ಮಾರಾಟ ಕಂಪನಿ ಇವರೆಡಕ್ಕೂ ಹತ್ತಾರು ವರ್ಷಗಳ ಸಂಬಂಧ ಇದೆ. ಮೊದಲು ಸೋಪು ಕಾರ್ಖಾನೆಯು ಉತ್ಪಾದನೆ ಹೆಚ್ಚಿಲ್ಲದ ಕಾರಣ ಎಂ.ಐ.ಎಸ್.ಎಲ್. ಸೋಪು ಕಾರ್ಖಾನೆಯಲ್ಲಿ ತಯಾರಾದಂಥ ವಸ್ತುಗಳನ್ನು ಇಡೀ ಭಾರತದಲ್ಲಿ ಬೇರೆ ಬೇರೆ ಏಜನ್ಸಿಗಳ ಮೂಲಕ ಮಾರಾಟ ಮಾಡುತ್ತಿತ್ತು. ಕಳೆದ ವರ್ಷ ಸೋಪು ಕಾರ್ಖಾನೆಯು ಉತ್ಪಾದನಾ ಶಕ್ತಿ ದ್ವಿಗುಣವಾಗಿದೆ. ಅದರ ಎಕ್ಸ್‌ಪಾನ್‌ಷನ್ ಪ್ರಾಜೆಕ್ಟ್ ಆದ ಮೇಲೆ ಸೋಪು ತಯಾರಿಕೆ ದ್ವಿಗುಣವಾಯಿತು. ಆದರೆ, ಮಾರಾಟ ಮಾಡತಕ್ಕ ಏಜನ್ಸಿ ಎಕ್ಸ್‌ಪಾನ್‌ಷನ್ ಆಗಿಲ್ಲ. ಈ ಎರಡರ ಬೆಳವಣಿಗೆಯಲ್ಲಿ ಕೋ-ಆರ್ಡಿನೇಷನ್ ಇರಲಿಲ್ಲ. ಈ ದಿಸೆಯಿಂದ ಕಳೆದ ತಿಂಗಳು ಒಂದು ತೀರ್ಮಾನಕ್ಕೆ ಬರಲಾಗಿದೆ. ಇರತಕ್ಕ ಸ್ಟಾಕು ಭಾರಿ ಏನೂ ಅಲ್ಲ. ಆರೂ ಕೋಟಿ ರೂಪಾಯಿಗಳ ಸ್ಟಾಕು ಏನಿದೆ ಅದು ಎರಡೂವರೆ ತಿಂಗಳ ಬೇಡಿಕೆ ಮಾತ್ರ. ಮಾನ್ಯ ಸದಸ್ಯರ ಕಳಕಳೆ ಏನೆಂದರೆ ಸೋಪು ಕಾರ್ಖಾನೆಯಲ್ಲಿ ಸೋಪು ಉತ್ಪಾದನೆ ಚೆನ್ನಾಗಿ ಆಗಬೇಕು ಉತ್ಪಾದನೆಯಾದುದ್ದು ಮಾರಾಟವಾಗಿ ಲಾಭ ಗಳಿಸಬೇಕು ಎನ್ನುವುದು. ಇದು ರೋಗಗ್ರಸ್ತವಾಗಿರುವುದರ ಬಗ್ಗೆ ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಸೂಚನೆಯ ವ್ಯಾಪ್ತಿಯಲ್ಲಿ ಅದು ಬರುವುದಿಲ್ಲ. ಮಾನ್ಯ ಸದಸ್ಯರ ಸೂಚನೆ ಏನಿದೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅಲ್ಪಕಾಲಿಕ ದೋಷವನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಂಡಿದೆ.

ಶ್ರೀ ಬಿ. ಸ್ವಾಮಿರಾವ್.—ಸೋಪನ್ನು ಮಾರಾಟ ಮಾಡುವಂಥ ವ್ಯವಸ್ಥೆ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ನಮಗೇನು ಸಂಶಯ ಬಂದಿದೆ ಎಂದರೆ ಸರ್. ಎಂ ವಿಶ್ವೇಶ್ವರಯ್ಯನವರು ಕರ್ನಾಟಕದಲ್ಲಿ ತಮ್ಮ ಶ್ರಮದಿಂದ ಯಾವ ಯಾವ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದಾರೋ, ಹಾಗೆ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದಾರೆಂದು ಕೇಳಿದ್ದೇವೆ. ಅದರ ಬಗ್ಗೆ ದಾಖಲೆ ಕೂಡ ಇದೆ. ಭದ್ರಾವತಿ ಐರ್ಬಿಣದ ಕಾರ್ಖಾನೆಯು ಈದು ರೋಗಗ್ರಸ್ತವಾಗಿ ಅದು ಮಾರಾಟವಾಗುವಂಥ ಸ್ಥಿತಿಗೆ ಬಂದಿದೆ. ಅದೇರೀತಿ ಈ ಕಾರ್ಖಾನೆ ಕೂಡ ಮಾರಾಟವಾಗುವಂಥ ಸ್ಥಿತಿಗೆ ಬಂದಿದೆಯೆ ? ಮಾನ್ಯ ಶ್ರೀನಿವಾಸ್‌ರವರು ಅದರ ಬಗ್ಗೆ ಸಂದೇಹವೇ ಇಲ್ಲವೆಂದು ಹೇಳುತ್ತಿದ್ದಾರೆ. ಈ ಕಾರ್ಖಾನೆಯಿಂದ ರಾಜ್ಯಕ್ಕೆ ಸುಮಾರು ೩೦ ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ. ಆದರೆ ಇಂದು ಈ ಕಾರ್ಖಾನೆ ೧೨ ಕೋಟಿ ರೂಪಾಯಿಗಳ ನಷ್ಟದಲ್ಲಿದೆಯೆಂದು ಹೇಳಿರುವುದನ್ನು ನೋಡಿದರೆ ಬಹುಶಃ ಇದೂ ಸಹ ಉಳಿಯುವುದಿಲ್ಲವೆಂದು ಕಾಣುತ್ತದೆ. ಇದನ್ನು ಪಿ.ಬಿ.ಐ. ತನಿಖೆಗೆ ಒಳಪಡಿಸಿದರೆ ಬಹುಶಃ ಇದು ಉಳಿಯಬಹುದು ಲಾಭ ಕೂಡ ಗಳಿಸಬಹುದು ಎನ್ನುವ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಪಿ.ಬಿ.ಐ. ಎನ್‌ಕ್ವೈರಿ ವಿತಕ್ಕೆ ಬೇಕೂ ? ಲುಕ್ಸಾನು ಆಗುತ್ತಿರುವುದು ಕಣ್ಣಿದುರಿಗೆ ಕಾಣುತ್ತಿದೆ. ಅದು ಸರ್ಕಾರಕ್ಕೂ ಗೊತ್ತಿದೆ. ಮಾನ್ಯ ಸದಸ್ಯರು ವಿನಾಕಾರಣ ಪಿ.ಐ.ಎಸ್. ಎಲ್. ಬಗ್ಗೆ ಪ್ರಸ್ತಾಪ ಮಾಡಿದರು. ಕಳೆದ ವರ್ಷವೇ ನಾವೇ ಸ್ಪಷ್ಟಪಡಿಸಿದ್ದೇವೆ. ಸರ್ಕಾರಿ ಕಂಪನಿಗಳು ರೋಗಗ್ರಸ್ಥವಾಗಿದ್ದರೆ ಮರಣಾವಸ್ಥೆಗೆ ಬಂದಿದ್ದರೆ ಅವುಗಳನ್ನು ಹೆಗಲಮೇಲೆ ಇಟ್ಟುಕೊಂಡು ಹೋಗತಕ್ಕಂಥಾದ್ದು ಸರ್ಕಾರದ ನೀತಿಯಲ್ಲವೆಂದು. ಕೇಂದ್ರ ಸರ್ಕಾರ ರಿಪೇರಿ ಮಾಡಲಿ ಕೇಂದ್ರ ಸರ್ಕಾರದ ಹಣಕಾಸಿನ ಸಂಸ್ಥೆಗಳು ಇವುಗಳನ್ನು ಸರಿಪಡಿಲಾ ಕ್ರಮ ತೆಗೆದುಕೊಳ್ಳುವುದಾದರೆ ಸರ್ಕಾರ ಅವರಿಗೆ ಸಹಸಲು ವಿಚಾರ ಮಾಡುತ್ತದೆ. ಈ ಕಾರ್ಖಾನೆ ಇನ್ನೂ ವಿಮಾರಾಟ ಮಾಡುವಂಥ ಸ್ಥಿತಿಗೆ ಬಂದಿಲ್ಲ ಯಾವುದೇ ಕಂಪನಿಯನ್ನು ಹಣಕಾಸಿನ ಕೊರತೆಯಿಂದಾಗಲೀ ವಿದ್ಯುಚ್ಛಕ್ತಿ ಕೊರತೆಯಿಂದಾಗಲೀ ಮ್ಯಾನೇಜ್ ಮೆಂಟಿನ ಕೊರತೆಯಿಂದಾಗಲೀ ಸರಿಪಡಿಸುವುದಕ್ಕೆ ಸಾಧ್ಯವಾಗದಿದ್ದರೆ, ಆಗ ಸ್ವಾಮಿರಾವ್ ಅವರನ್ನು ಕರೆಯಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಸಾಬೂನು ಕಾರ್ಖಾನೆಯು ಉತ್ಪಾದನಾ ವೇಗಕ್ಕೆ ಸಾಟಿಯಾಗಿ ಎಂ.ಐ.ಎಸ್.ಎಲ್.ನ ಮಾರಾಟದ ವೇಗ ಇಲ್ಲವೆಂದು ಮಾನ್ಯ ಮಂತ್ರಿಯವರು ಹೇಳಿದರು. ಸಾಬೂನಿನ ಕಾರ್ಖಾನೆಯು ತನ್ನ ಸಂಪೂರ್ಣ ಶಕ್ತಿಯನ್ನು ಬಳಸಿ ಸೋಪುಗಳನ್ನು ತಯಾರು ಮಾಡಿದರೆ, ಉತ್ಪಾದನೆಯಾದ ವಸ್ತುಗಳು ಎಲ್ಲಿಗೆ ಹೋಗಬೇಕು. ಸಂಪೂರ್ಣ ಉತ್ಪಾದನೆ ಪ್ರಕಾರ ೨೬,೦೦೦ ಟನ್ ವಸ್ತುಗಳನ್ನು ಉತ್ಪತ್ತಿ ಮಾಡಿದರೆ ಅದು ಸ್ಟಾಕ್ ಆಗುತ್ತಾ ಹೋದರೆ ಕಾರ್ಖಾನೆಯ ಗತಿ ಏನು ಎನ್ನುವುದು ಮುಖ್ಯ ಪ್ರಶ್ನೆ ?

ಅಧ್ಯಕ್ಷರು.—ನೇರವಾಗಿ ವಿವರಣೆ ಕೇಳಿ ತಾವು ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಆರ್. ಎಸ್. ನಾಯಕ್.—ಈಗ ಎರಡೂವರೆ ತಿಂಗಳ ಸ್ಟಾಕ್ ಇದೆ ಬರುವ ಎರಡೂವರೆ ತಿಂಗಳೂ ಸೇರಿದರೆ ಒಟ್ಟು ಐದು ತಿಂಗಳು ಹಿಂದೆ ಬೀಳುತ್ತದೆ. ಇದನ್ನು ಹೇಗೆ ವಿತರಣೆ ಮಾಡುತ್ತೀರಿ ? ಕಾರ್ಖಾನೆಯ ಸಂಪೂರ್ಣ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಯಾವ ಪ್ರಯತ್ನ ಮಾಡಿದ್ದೀರಿ ?

ಶ್ರೀ ಜೆ. ಹೆಚ್ ಪಟೇಲ್.—ಮಾನ್ಯ ಅಧ್ಯಕ್ಷರೇ, ನಾನಾಗಲೇ ಹೇಳಿದ್ದೇನೆ. ಈ ಎರಡೂ ಸರ್ಕಾರಿ ಕಂಪನಿಗಳು. ಈ ಎರಡರ ಮಧ್ಯೆ ಕಳೆದ ಡಿಸೆಂಬರ್‌ನಲ್ಲಿ ಒಂದು ಒಡಂಬಡಿಕೆಗೆ ಬರಲಾಗಿದೆ. ಒಂದೇ ತಿಂಗಳಲ್ಲಿ ಒಂದು ಸಾವಿರ ಟನ್ ಉತ್ಪಾದನೆ ಜಾಸ್ತಿಯಾಗಿದ್ದರಿಂದ ಎರಡೂವರೆ ತಿಂಗಳ ಸ್ಟಾಕ್ ಇದೆ. ಉತ್ಪಾದನೆಗೆ ತಕ್ಕಹಾಗೆ ಮಾರಾಟದ ವ್ಯವಸ್ಥೆಯನ್ನು ಎಂ.ಐ.ಎಸ್.ಎಲ್.ನವರು ಮಾಡಿದ್ದಾರೆ ಅವರ ಏಜನ್ಸಿಯನ್ನು ನಾವು ನೋಡಬೇಕಾಗುತ್ತದೆ. ಆ ತೀರ್ಮಾನ ಆಗುವವರೆಗೆ ಎರಡನ್ನು ಸಮಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ.

SRI S. BANGARAPPA.—Sir, the original Soap Factory that was designed and equipped with modern equipments has the minimum capacity of producing 10,000 tons of toilet soaps and 5000 tons of laundry soaps or washing soaps per annum. You are producing now only 7200 tons of soap per annum though the existing plant and machinery has the capacity to produce 15000 tons of soap per annum Your production of soap is not even half of the installed capacity of the existing plant and machinery. In addition to this, the production of soap of the last two and half months is lying in your godown If this is the situation, where is the necessity to expand the project for an additional capacity of 35000 tons of soap with huge investment of about Rs 10 crores again in plant and machinery ನೀವು ೧೦ ಕೋಟಿ ರೂಪಾಯಿಗಳ ಹಣವನ್ನು ವಿಚರ್ಚಮಾಡಿ ಹೆಚ್ಚಿಸಾವಿರ ಟನ್ ಸೋಪನ್ನು ಒಂದು ವರ್ಷಕ್ಕೆ ಉತ್ಪಾದನೆ ಮಾಡುವಂತಹ ಮೆಷಿನರಿಯನ್ನು ಕೊಳ್ಳುವ ಅಗತ್ಯ ಇದೆಯೆ? ಈಗ ವಿಳೂವರೆ ಸಾವಿರ ಟನ್ ಸೋಪನ್ನು ಉತ್ಪಾದನೆ ಮಾಡತಕ್ಕ ಕ್ಯಾಪಾಸಿಟಿ ಇದ್ದರೂ ಅದನ್ನೆ ನೀವು ಮಾಡುವುದಕ್ಕೆ ಆಗುತ್ತಿಲ್ಲ. ಮತ್ತೆ ೧೦ ಕೋಟಿ ರೂಪಾಯಿಗಳು ವಿಚರ್ಚಮಾಡಿ ಎಕ್ಸ್‌ಪ್ಯಾಂಟ್ ಪರ್ಚೇಸ್ ಮಾಡಿ ನೀವು ಮಾಡುವುದಾದರೂ ಏನು, ಇಂತಹ ತೀರ್ಮಾನಗಳನ್ನು ಏತಕ್ಕೆ ಕೈಗೊಳ್ಳುತ್ತೀರಿ? ಇಂತಹ ಕೆಲಸಕ್ಕೆ ಏತಕ್ಕೆ ಕೈಹಾಕುತ್ತೀರಿ?

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ವಿರೋಧಪಕ್ಷದ ನಾಯಕರ ಪ್ರಶ್ನೆಗೆ ಕಾಲಿಂಗ್ ಅಟೆನ್‌ಷನ್ ನಲ್ಲಿಯೇ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಆದರೂ ಹೇಳುತ್ತೇನೆ, ಅದರ ಇನ್‌ಸ್ಟಾಲ್ ಕ್ಯಾಪಾಸಿಟಿ ೧೨ ಸಾವಿರ ಟನ್‌ಗಳು ಇದ್ದಾಗ ಶೇಕಡ ೫೦ರಷ್ಟು ಅಚೀವ್‌ಮೆಂಟ್ ಆಗಿತ್ತು. ಯಾವುದೇ ಕಾರ್ಖಾನೆ ಇನ್‌ಸ್ಟಾಲ್ ಕ್ಯಾಪಾಸಿಟಿ ಶೇಕಡ ೬೦ ಅಥವಾ ೭೦ಕ್ಕೆ ಹೋಗುವುದು ಬಹಳ ಕಡಿಮೆ. ಕೆಲವು ಕಾರ್ಖಾನೆಗಳು ಶೇಕಡ ೮೦,೯೦ ಅಚೀವ್‌ಮೆಂಟ್ ಮಾಡುತ್ತವೆ ಅದು ಬೇರೆ. ಇನ್‌ಸ್ಟಾಲ್ ಕ್ಯಾಪಾಸಿಟಿ ಗರಿಷ್ಟ ಅಚೀವ್ ಮಾಡುವುದಕ್ಕಾಗುವುದಿಲ್ಲ. ಕಳೆದ ಮೂರು ವರ್ಷಗಳಿಂದ ಕರ್ನಾಟಕ ಸೋಪ್ ಫ್ಯಾಕ್ಟರಿಗೆ ಕಾಂಪಿಟೀಷನ್ ಇದೆ. ಗಾಡ್ರೇಜ್ ಟಾಟಾ ಮತ್ತು ಬಿರ್ಲಾ ಕಂಪನಿಗಳ ಎದುರಿಗೆ ಕರ್ನಾಟಕ ಸೋಪ್ ಫ್ಯಾಕ್ಟರಿ ಸಣ್ಣದು ಇರುವುದರಿಂದ ಕಾಂಪಿಟ್ ಮಾಡುವುದಕ್ಕಾಗುವುದಿಲ್ಲ, ವಿವರವಾಗಿ ನನ್ನ ಇಲಾಖೆಯ ಮೇಲಿನ ಬೇಡಿಕೆಗಳು ಬಂದಾಗ ಹೇಳುತ್ತೇನೆ. ಗರಿಷ್ಟಪಟ್ಟಷನ್ನು ಮುಟ್ಟುವುದಕ್ಕೆ ಆಗದೇ ಇರುವಾಗ ಎಕ್ಸ್‌ಪಾನ್‌ಷನ್ ಏತಕ್ಕೆ ಮಾಡಿದಿರಿ ಎಂದು ಕೇಳುತ್ತಿದ್ದೀರಿ. ಮಾರ್ಕೆಟ್‌ನ ಅವಶ್ಯಕತೆ ಇತ್ತು, ಟಿಕ್ನಾಲಜಿ ಅವಶ್ಯಕತೆ ಇದೆ ಅದಕ್ಕೋಸ್ಕರ ಮಾಡಿದ್ದೇವೆ.